ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT: Reg formation of Maharashtra govt
ಪತ್ರಿಕೆಯ ಹೆಸರು : NAME OF THE NEWS PAPER : Vijayavani
ದಿನಾಂಕ : DATE : 28.11.2019

# ಮಹಾ ಸವಾಲಿನ ಸರ್ಕಾರ

## ರಾಜಕೀಯ ಸರ್ಕಸ್‌ನಲ್ಲಿ ಹುಲಿಕುಣಿತ ಭಾಗ-1। ಇಂದು ಉದ್ಧವ್ ಪ್ರಮಾಣ

ಸಿಎಂ ಸ್ಥಾನಕ್ಕಾಗಿ ಮೈತ್ರಿ ಕಡಿತ, ಅಧಿಕಾರಕ್ಕಾಗಿ ಪಕ್ಷ ಜಿಗಿತದಂತಹ ಬೃಹನ್ನಾಟಕಕ್ಕೆ ಸಾಕ್ಷಿಯಾಗಿದ್ದ ಮಹಾರಾಷ್ಟ್ರದಲ್ಲಿನ್ನು ಮೈತ್ರಿ ಸರ್ಕಾರದ ಆಡಳಿತ ಶುರುವಾಗಲಿದೆ. ಕೈಜಾರಿ ಕಮಲ ಸೇರಿದ್ದ ಅಧಿಕಾರದ ಚುಕ್ಕಾಣಿಯನ್ನು ಕಾಂಗ್ರೆಸ್ ಮತ್ತು ಎನ್‌ಸಿಪಿ ನೆರವಿನೊಂದಿಗೆ ಗಿಟ್ಟಿಸಿಕೊಂಡಿರುವ ಶಿವಸೇನೆಯ ಮುಖ್ಯಸ್ಥ ಹಾಗೂ ಮಹಾರಾಷ್ಟ್ರ ಅಘಾಡಿ ಮೈತ್ರಿಕೂಟದ ನಾಯಕ ಉದ್ಧವ್ ಠಾಕ್ರೆ ಗುರುವಾರ ಮಹಾರಾಷ್ಟ್ರದ 17ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಬಾಳಾ ಠಾಕ್ರೆ ಕುಟುಂಬದ ಕುಡಿಯ ಈ ಮಹಾಗರ್ಜನೆ ಮಹಾರಾಷ್ಟ್ರ ರಾಜಕೀಯಕ್ಕೆ ಹೊಸ ತಿರುವು ನೀಡಿದರೆ ಶಿವಸೇನೆಯ 'ಹುಲಿ'ಯನ್ನು ಕಟ್ಟಿಹಾಕುವ ಬಿಜೆಪಿ ಕಾರ್ಯತಂತ್ರ ಮುಂಬರುವ ಕದನ ಕುತೂಹಲ ಹೆಚ್ಚಿಸಿದೆ. ಸೈದ್ಧಾಂತಿಕ ವೈರುಧ್ಯದ ಪಕ್ಷಗಳ ದೋಸ್ತಿ ಎಷ್ಟು ದಿನ ಎಂಬ ಶಂಕೆಯ ನಡುವೆಯೇ ಮೈತ್ರಿ ಸರ್ಕಾರ ಮುನ್ನಡೆಯುವ ಸವಾಲು ಎದುರಾಗಿದೆ.

### ಸ್ಥಾನ ಹಂಚಿಕೆ ಪೂರ್ಣ

ವೈ.ಬಿ.ಚವ್ಹಾಣ್ ಸಭಾಂಗಣದಲ್ಲಿ ಬುಧವಾರ ಮಧ್ಯಾಹ್ನ ನಡೆದ ತ್ರಿಪಕ್ಷಗಳ ನಾಯಕರ ಸಭೆಯಲ್ಲಿ ಅಧಿಕಾರ ಹಂಚಿಕೆಯ ಅಂತಿಮ ಒಪ್ಪಂದ ಏರ್ಪಟ್ಟಿರುವುದಾಗಿ ಮೂಲಗಳು ತಿಳಿಸಿವೆ. ಆದರೆ, ಉದ್ಧವ್ ಜತೆಗೆ ಎಷ್ಟು ಮಂದಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂಬುದು ಖಚಿತವಾಗಿಲ್ಲ. ಮಹಾರಾಷ್ಟ್ರದಲ್ಲಿ ಸಿಎಂ ಸೇರಿ 43 ಮಂದಿಗೆ ಸಚಿವರಾಗಲು ಅವಕಾಶವಿದೆ.

ಪಿಟಿಐ



ಪ್ರಮಾಣವಚನದ ಮುನ್ನಾದಿನವಾದ ಬುಧವಾರ ಹೂಗುಚ್ಛ ನೀಡಿ ರಾಜ್ಯಪಾಲರಿಗೆ ಆಹ್ವಾನ ನೀಡಿದ–ಉದ್ಧವ್ ಠಾಕ್ರೆ ದಂಪತಿ.

### ಯಾರಿಗೆಷ್ಟು ಸ್ಥಾನ

- ಶಿವಸೇನೆಗೆ ಮುಖ್ಯಮಂತ್ರಿ ಹುದ್ದೆ ಸೇರಿ 16 ಮಂತ್ರಿಗಿರಿ
- ಎನ್‌ಸಿಪಿಗೆ ಉಪಮುಖ್ಯಮಂತ್ರಿ ಸೇರಿ 14 ಸಚಿವ ಸ್ಥಾನ
- ಕಾಂಗ್ರೆಸ್‌ಗೆ 13 ಸಚಿವ ಸ್ಥಾನದ ಜತೆಗೆ ಸ್ಪೀಕರ್ ಹುದ್ದೆ

### ಎಲ್ಲಿ ಕಾರ್ಯಕ್ರಮ

- ಮುಂಬೈನ ಶಿವಾಜಿ ಪಾರ್ಕ್
- ಎಷ್ಟೊತ್ತಿಗೆ: ಸಂಜೆ 6:30

### ಮೈತ್ರಿ ಸವಾಲು

- ಸೈದ್ಧಾಂತಿಕ ವಿಚಾರದಲ್ಲಿ ರಾಜಿಯಿಲ್ಲದೆ ಸರ್ಕಾರದಲ್ಲಿ ರಗಳೆ ಆಗದಂತೆ ಜಾಗೃತರಾಗುವುದು
- ಸರ್ಕಾರ ರಚನೆ ಹೈಡ್ರಾಮಾದಿಂದ ಜನರ ಮನಸ್ಸಿನಲ್ಲಿ ಮೂಡಿರುವ ಅಸಹ್ಯವನ್ನು ದೂರಮಾಡುವುದು
- ಮೈತ್ರಿ ಒಗ್ಗಟ್ಟು ಮುರಿಯಲು ನಡೆಯುವ ಯತ್ನಗಳಿಂದ ಪಾರಾಗುವುದು, ಶಾಸಕರನ್ನು ಕಾಯ್ದುಕೊಳ್ಳುವುದು
- ಸರ್ವಾನುಮತದ ನಿರ್ಧಾರ ಕೈಗೊಳ್ಳಲು ಸಮನ್ವಯ ತರುವುದು
- ಸೆಕ್ಯುಲರ್ ವಿಚಾರಗಳಲ್ಲಿನ ಗೊಂದಲಕ್ಕೆ ತೆರೆ ಎಳೆಯುವುದು
- ಐದು ವರ್ಷ ಸರ್ಕಾರ ನಡೆಸುತ್ತಲೇ ವೈಯಕ್ತಿಕ ನೆಲಗಟ್ಟಿನಲ್ಲಿ ಪಕ್ಷ ಬಲಪಡಿಸಿಕೊಳ್ಳುವುದು
- ನಾಯಕರ ವ್ಯಕ್ತಿಗತ ಪ್ರತಿಷ್ಠೆಯಿಂದ ಸರ್ಕಾರಕ್ಕೆ ಹಾನಿಯಾಗದಂತೆ ನೋಡಿಕೊಳ್ಳುವುದು

### ಅಜಿತ್ ಪವಾರ್ ಡಿಸಿಎಂ?

ಕೊನೇ ಕ್ಷಣದಲ್ಲಿ ಬಿಜೆಪಿಗೆ ಕೈಕೊಟ್ಟು ಎನ್‌ಸಿಪಿಗೆ ಮರಳಿದ ಅಜಿತ್ ಪವಾರ್ ಅವರನ್ನೇ ಉಪಮುಖ್ಯಮಂತ್ರಿ ಮಾಡಲಾಗುತ್ತದೆ ಎಂದು ಹೇಳಲಾಗುತ್ತಿದೆ. ಎನ್‌ಸಿಪಿಯಿಂದ ಜಯಂತ್ ಪಾಟೀಲ್ ಮತ್ತು ಕಾಂಗ್ರೆಸ್‌ನಿಂದ ಬಾಳಾಸಾಹೇಬ್ ಥೋರಟ್ ಡಿಸಿಎಂ ಆಗಲಿದ್ದಾರೆ ಎಂದು ಮಂಗಳವಾರ ತ್ರಿಪಕ್ಷಗಳ ಸಭೆಯ ನಂತರ ಘೋಷಿಸಲಾಗಿತ್ತು. ಆದರೆ ಈಗ ಜಯಂತ್ ತ್ಯಾಗಕ್ಕೆ ಸಿದ್ಧರಿದ್ದಾರೆನ್ನಲಾಗಿದೆ. ಕಾಂಗ್ರೆಸ್ ಸ್ಪೀಕರ್ ಸ್ಥಾನಕ್ಕಾಗಿ ಡಿಸಿಎಂ ಹುದ್ದೆ ಬಿಟ್ಟುಕೊಟ್ಟಿದೆ.



### ಉದ್ಧವ್ ಸಿಎಂ ಹಾದಿ

1966ರಲ್ಲಿ ಶಿವಸೇನೆ ಅಸ್ತಿತ್ವಕ್ಕೆ ಬಂದ ಬಳಿಕ ಠಾಕ್ರೆ ಕುಟುಂಬದಿಂದ ಅಧಿಕಾರಕ್ಕೇರುತ್ತಿರುವ ಮೊದಲ ವ್ಯಕ್ತಿ ಎಂಬ ದಾಖಲೆಯನ್ನು ಉದ್ಧವ್ ಬರೆದಿದ್ದಾರೆ. ಶಿವಸೇನೆ ಮುಖ್ಯಸ್ಥ ಬಾಳಾ ಠಾಕ್ರೆ ಪುತ್ರ ಉದ್ಧವ್(59)ಮೊದಲು ಶಿವಸೇನೆ ಮುಖವಾಣಿ ಸಾಮ್ನಾದ ಸಂಪಾದಕರಾಗಿ ಹೊಣೆ ಹೊತ್ತರು. ಹಂತಹಂತವಾಗಿ ಪಕ್ಷದ ಜವಾಬ್ದಾರಿ ಹೊತ್ತು ಮುಂಚೂಣಿಗೆ ಬಂದರು. 2003ರಲ್ಲಿ ಪಕ್ಷ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದರು. ಬಾಳಾ ಠಾಕ್ರೆ ನಿಧನ ಬಳಿಕ ಚುನಾವಣೆ ರಾಜಕೀಯದಿಂದ ದೂರ ಇದ್ದುಕೊಂಡೇ ಶಿವಸೇನೆ ಮುನ್ನಡೆಸಿದರು. ಉದ್ಧವ್‌ಗೆ ಪತ್ನಿ ರಶ್ಮಿ ಹಾಗೂ ಆದಿತ್ಯ ಸೇರಿ ಇಬ್ಬರು ಪುತ್ರರಿದ್ದಾರೆ. ಆದಿತ್ಯ ವರ್ಲಿ ಕ್ಷೇತ್ರದ ಶಾಸಕ.

ಉಪ ಸಮರದ ಮೇಲೆ ಮಹಾ ಪರಿಣಾಮದ ಲೆಕ್ಕಾಚಾರ ▶7